**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು**

ಸಿ ಸಿ ನಂಃ**607/2019**

ಚಾಸಾ-**11**/ಪ್ರಾಸಾ-**04**

**ಮಾನ್ಯ ಉಚ್ಚ ನ್ಯಾಯಾಲಯ ವಿಸಿ ನಿಯಮಾವಳಿ 2020 ರ ಅಡಿಯಲ್ಲಿ ಸಾಕ್ಷಿಯನ್ನು ವಿಸಿಯ ಮೂಲಕ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ದಿನಾಂಕಃ**25.07.2025.**

| | | |
|---|---|---|
| ಹೆಸರು | : | ಇಮ್ರಾನ್ ಬೇಗ್ ತಂದೆ ಕಮರ್ ಬೇಗ್ |
| ವಯಸ್ಸು | : | **44** ವರ್ಷ |
| ಉದ್ಯೋಗ | : | ಪಿಐ, ತೀರ್ಥಹಳ್ಳಿ ಪೋಲೀಸ್ಠಾಣೆ |
| ವಿಳಾಸ | : | ತೀರ್ಥಹಳ್ಳಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ಆಗಸ್ಟ್ **2018** ರಿಂದ ಪೆಬ್ರುವರಿ **2020** ರವರೆಗೂ ಜಗಳೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ**02.02.2019** ರಂದು ಈ ಪ್ರಕರಣದ ಕಡತವನ್ನು ಚಾಸಾ-**12** ರವರಿಂದ ಪಡೆದುಕೊಂಡು ಪರಿಶೀಲೀಸಿರುತ್ತೇನೆ . ನಂತರ ಅದೇ ದಿನಾ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ ತಯಾರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರು ಇವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ . ದಿಃ **11.02.2019** ರಂದು ಸದರಿ ಪ್ರಕರಣದ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾದವರ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗೆಡುಮಾಡಿರುತ್ತೇನೆ . ದಿಃ**08.04.2019** ರಂದು ಮುಂದಿನ ತನಿಖೆಗೆ ಚಾಸಾ-**12** ರವರಿಗೆ ಪ್ರಕರಣವನ್ನು ವರ್ಗಾಯಿಸಿರುತ್ತೇನೆ . ನಾನು ಆರೋಪಿಗಳನ್ನು

ಮತ್ತೆ ನೋಡಿದರೆ ಗುರುತಿಸುತ್ತೇನೆ **.** ಸಾಕ್ಷಿ ಈಗ ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿ **1** ಮತ್ತು **2** ರವರನ್ನು ನೋಡಿ ಗುರುತಿಸಿರುತ್ತಾರೆ **.**

**<u>ಪಾಟೀ ಸವಾಲುಃ- ಆರೋಪಿ ಪರ T.B.R., ವಕೀಲರಿಂದಃ-</u>**

ಆರೋಪಿ **1** ಮತ್ತು **2** ರವರು ಆರೋಗ್ಯ ಇಲಾಖೆಯಲ್ಲಿ ಸರ್ಕಾರಿ ನೌಕರರು ಇರುತ್ತಾರೆ ಎಂದರೆ ಸರಿ. ಚಾಸಾ**-1** ರವರ ವಿರುದ್ಧ ಆರೋಪಿಗಳು ಯಾವುದೇ ಗಲಾಟೆ ಮಾಡಿರುವುದಿಲ್ಲ ಯಾವುದೇ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ **.** ಚಾಸಾ**-1** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

ಓ ಹೇ ಕೇ ಸರಿ ಇದೆ

**Sd/-**

ಪ್ರ.ದ.ನ್ಯಾ.ದಂ., ಜಗಳೂರು